ದಿಃ 27.02.2026

**ಪ್ರಭಾರ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಹೊಳಲ್ಕೆರೆ.**

**ಸಿ.ಸಿ.1038/2020**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಡಾ. ವಿನಯ್ ಸಿ ಸಜ್ಜನ್ | ಪ್ರಾ.ಸಾ.6 |
| ತಂದೆಯ/ಗಂಡನ ಹೆಸರು | : | ವೈ. ಚಂದ್ರಶೇಖರಯ್ಯ | ಚಾ.ಸಾ.8 |
| ವಯಸ್ಸು | : | 47 ವರ್ಷ | |
| ಕೆಲಸ | : | ವೈದ್ಯಾಧಿಕಾರಿಗಳು, ಸಮುದಾಯ ಆರೋಗ್ಯ ಕೇಂದ್ರ, ಸಿರಿಗೆರೆ, ಚಿತ್ರದುರ್ಗ | ಸಾ ಪ್ರ ಬೋ |
| ವಾಸ | : | ಚಿತ್ರದುರ್ಗ | ದಿಃ27.02.2026 |

**ಮುಖ್ಯ ವಿಚಾರಣೆ ಎ.ಪಿ.ಪಿ.ಯವರಿಂದಃ**

ನಾನು ದಿನಾಂಕ 20.03.2008 ರಿಂದ 10.07.2025 ರವರೆಗೆ ಹೊಳಲ್ಕೆರೆಯ ಸಾರ್ವಜನಿಕ ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿರುತ್ತೇನೆ.

2. ದಿನಾಂಕ 06.08.2012 ರಂದು ಸಂಜೆ 04.30 ಗಂಟೆಯ ಸಮಯದಲ್ಲಿ ನಾನು ತುರ್ತು ಚಿಕತ್ಸಾ ಘಟಕದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಚಾಸಾ.2 ರವರು ಹಲ್ಲೆಯ ಹಿನ್ನಲೆಯಲ್ಲಿ ನನ್ನ ಸಮಕ್ಷಮ ಹಾಜರಾಗಿದ್ದು, ಅವರನ್ನು ಪರೀಕ್ಷಿಸಲಾಗಿ ಕುತ್ತಿಗೆಯ ಹಿಂಭಾಗದಲ್ಲಿ ನೋವಿನ ಅನುಭವ ಇತ್ತು. ಎಡ ಮೊಣಕೈಯ ಮೇಲೆ 2*1 ಸೆಂ. ಮೀಟರ್ ತರಚಿದ ಗಾಯ ಇತ್ತು. ಎಡ ಕಿರುಬೆರಚಿನ ಮೇಲೆ ತರಚಿದ ಗಾಯ ಇತ್ತು. ಈ ಮೇಲ್ಕಂಡ ಎಲ್ಲಾ ಗಾಯಗಳು ಸಾಮಾನ್ಯ ಸ್ವರೂಪದ ಗಾಯಗಳಾಗಿರುತ್ತವೆ. ನ್ಯಾಯಾಲಯದ ಮುಂದಿರುವ ಮು.ಮಾ.1 ರ ಕುಡುಗೋಲಿನ ಹಿಂಭಾಗ ತಗುಲಿದ್ದಲ್ಲಿ ಮೇಲ್ಕಂಡ ಗಾಯಗಳು ಏರ್ಪಡುವ ಸಾಧ್ಯತೆ ಇದೆ. ಸಾಕ್ಷಿ ಗಾಯದ ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ್ದು, ನಿಪಿ.5 ಎಂದು ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ.5(ಎ) ಎಂದು ಗುರುತಿಸಲಾಯಿತು.

3. ಅದೇ ದಿನ ಸಂಜೆ 04.30 ಗಂಟೆಯ ಸಮಯದಲ್ಲಿ ನಾನು ತುರ್ತು ಚಿಕತ್ಸಾ ಘಟಕದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಚಾಸಾ.3 ರವರು ಹಲ್ಲೆಯ ಹಿನ್ನಲೆಯಲ್ಲಿ ನನ್ನ ಸಮಕ್ಷಮ ಹಾಜರಾಗಿದ್ದು, ಅವರನ್ನು ಪರೀಕ್ಷಿಸಲಾಗಿ ಕುತ್ತಿಗೆಯ ಹಿಂಭಾಗದಲ್ಲಿ 20*0.5 ಸೆಂ. ಮೀಟರ್ ತರಚಿದ ಗಾಯ ಇದ್ದು, ಕೊರಳ ಚೈನನ್ನು ಎಳೆದಾಗ ಆಗಿರುವ ಸಾಧ್ಯತೆ ಇದೆ.

ದಿಃ 27.02.2026

ಕುತ್ತಿಗೆ ಹಿಂಭಾಗ ಮತ್ತು ತೊಡೆಯ ಭಾಗದಲ್ಲಿ ನೋವಿನ ಅನುಭವ ಇತ್ತು. ಈ ಮೇಲ್ಕಂಡ ಎಲ್ಲಾ ಗಾಯಗಳು ಸಾಮಾನ್ಯ ಸ್ವರೂಪದ ಗಾಯಗಳಾಗಿರುತ್ತವೆ. ನ್ಯಾಯಾಲಯದ ಮುಂದಿರುವ ಮು.ಮಾ.1 ರ ಕುಡುಗೋಲಿನಿಂದ ಹಲ್ಲೆ ಮಾಡಿದಾಗ ಮತ್ತು ಕೈಕಾಲಿನಿಂದ ಹೊಡೆದಾಡಿದಾಗ ಆಗುವ ಸಾಧ್ಯತೆ ಇದೆ. ಸಾಕ್ಷಿ ಗಾಯದ ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ್ದು, ನಿಪಿ.6 ಎಂದು ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ.6(ಎ) ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲು : ಆರೋಪಿತರ ಪರ ಶ್ರೀ.ಆರ್.ಎಸ್ ವಕೀಲರಿಂದ</u>**

3. ಚಾಸಾ-2 ಮತ್ತು 3 ರವರೊಂದಿಗೆ ಸಂಬಂಧಿಕರು ಬಂದಿದ್ದು, ಆ ಬಗ್ಗೆ ಉಲ್ಲೇಖ ಮಾಡಿರುತ್ತೇನೆ. ಗಾಯದ ವಯಸ್ಸಿನ ಕುರಿತು ಉಲ್ಲೇಖ ಮಾಡಿಲ್ಲ. ಪೊಲೀಸರಿಗೆ ಅವರು ಸ್ವೀಕರಿಸಿದ ದಿನದಂದೇ ಗಾಯದ ಪ್ರಮಾಣಪತ್ರವನ್ನು ಬರೆದುಕೊಟ್ಟಿರುತ್ತೇನೆ. ಸಾಮಾನ್ಯವಾಗಿ ಎತ್ತಿನ ಬಂಡಿಯ ಮೇಲೆ ಹೋಗುವಾಗ ಒರಟಾದ ಪ್ರದೇಶದ ಮೇಲೆ ಬಿದ್ದಾಗ ಈ ರೀತಿಯ ಗಾಯಗಳು ಆಗುವ ಸಾಧ್ಯತೆ ಇದೆ ಎಂದರೆ ಸರಿ. ಚಾಸಾ-2 ಮತ್ತು 3 ರವರು ನನ್ನ ಸಮಕ್ಷಮ ಹಾಜರಾಗಿಲ್ಲ ಮತ್ತು ಯಾವುದೇ ಚಿಕಿತ್ಸೆ ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಆರೋಪಿತರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಗಾಯದ ಪ್ರಮಾಣಪತ್ರ ನೀಡಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿನ ಎಲ್ಲಾ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.

**ಮರುವಿಚಾರಣೆ : ಇಲ್ಲ.**

(ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿಯಿದೆ.

ಪ್ರಭಾರ ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ.